# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 194
2. ಸದಸ್ಯರ ಹೆಸರು : ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸುವ ದಿನಾಂಕ : 11.07.2018
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಸಕ್ಕರೆ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಕೆ.ಐ.ಎ.ಡಿ.ಬಿ ವತಿಯಿಂದ ಹಂಚಿಕೆಯಾದ ನಿವೇಶನಗಳಿಗೆ ಸಕಾಲದಲ್ಲಿ ಹಣ ಪಾವತಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು |
| ಆ. | ಬಂದಿದ್ದಲ್ಲಿ, 2015-16ನೇ ಸಾಲಿನಿಂದ ಪ್ರಸಕ್ತ ದಿನಗಳವರೆಗೆ ಕೆ.ಐ.ಎ.ಡಿ.ಬಿ. ವತಿಯಿಂದ ಹಂಚಿಕೆಯಾಗಿರುವ ನಿವೇಶನಗಳ ಸಂಖ್ಯೆ ಎಷ್ಟು; ಅವು ಯಾವುವು;<br>(ಕೈಗಾರಿಕಾ ಪ್ರದೇಶವಾರು ಮಾಹಿತಿ ಒದಗಿಸುವುದು) | 2015-16ನೇ ಸಾಲಿನಿಂದ ಇದುವರೆವಿಗೂ ವಿವಿಧ ಕೈಗಾರಿಕಾ ಪ್ರದೇಶಗಳಲ್ಲಿ ಒಟ್ಟು 2063 ಉದ್ದಿಮೆದಾರರುಗಳಿಗೆ ನಿವೇಶನ ಹಂಚಿಕೆ ಮಾಡಲಾಗಿದೆ.<br>ಕೈಗಾರಿಕಾ ಪ್ರದೇಶಾವಾರು ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ. |
| ಇ. | 2015-16ನೇ ಸಾಲಿನಿಂದ ಪ್ರಸಕ್ತ ದಿನಗಳವರೆಗೆ ನಿವೇಶನ ಹಂಚಿಕೆಯಾಗಿ ಮೊತ್ತ ಪಾವತಿಸದ ನಿವೇಶನ ಹಂಚಿಕೆದಾರರ ಸಂಖ್ಯೆ ಎಷ್ಟು; ಅವು ಯಾವುವು; (ಕೈಗಾರಿಕಾ ಪ್ರದೇಶವಾರು ಮಾಹಿತಿ ಒದಗಿಸುವುದು) | 2015-16ನೇ ಸಾಲಿನಿಂದ ಇದುವರೆವಿಗೂ ಕೈಗಾರಿಕಾ ಪ್ರದೇಶಗಳಲ್ಲಿ ನಿವೇಶನ ಹಂಚಿಕೆ ಪಡೆದು, ನಿಗಧಿತ ಅವಧಿಯ ಒಳಗಾಗಿ 590 ಪ್ರಕರಣಗಳಲ್ಲಿ ಹಂಚಿಕೆ ಮೊತ್ತವನ್ನು ಪಾವತಿಸಿರುವುದಿಲ್ಲ.<br>ಕೈಗಾರಿಕಾ ಪ್ರದೇಶವಾರು ವಿವರ ಅನುಬಂಧ-2 ರಲ್ಲಿ ಒದಗಿಸಿದೆ. |
| ಈ. | ಕೆ.ಐ.ಎ.ಡಿ.ಬಿ. ವತಿಯಿಂದ ನಿವೇಶನ ಹಂಚಿಕೆಯಾದ ನಂತರದಲ್ಲಿ ಹಣ ಪಾವತಿ ಮಾಡದ ಉದ್ಯಮಿಗಳು ಹಾಗೂ ನಿವೇಶನ ಹಂಚಿಕೆದಾರರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟಾಗುತ್ತಿರುವುದನ್ನು ತಡೆಗಟ್ಟಲು ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳೇನು; | ನಿವೇಶನ ಹಂಚಿಕೆ ಪಡೆದ ಹಂಚಿಕೆದಾರರು ಸಕಾರಣವಿಲ್ಲದೆ ಹಂಚಿಕೆ ಪತ್ರದ ವೇಳಾಪಟ್ಟಿಯಂತೆ ಬಾಕಿ ಮೊತ್ತ ಪಾವತಿಸದೇ ಇದ್ದ ಪಕ್ಷದಲ್ಲಿ, ಜಮೀನು ಹಂಚಿಕೆಯು ಸ್ವಯಂಚಾಲಿತವಾಗಿ ರದ್ದಾಗುತ್ತದೆ ಎಂದು ಹಂಚಿಕೆ ಪತ್ರದಲ್ಲಿ ಷರತ್ತು ವಿಧಿಸಲಾಗುತ್ತಿದೆ ಹಾಗೂ ಹಂಚಿಕೆ ರದ್ದಾದ ನಿವೇಶನಗಳನ್ನು ಹೊಸ ಉದ್ದಿಮೆದಾರರಿಗೆ ಹಂಚಿಕೆ ಮಾಡಲಾಗುತ್ತಿದೆ. ಆದಕಾರಣ ಸರ್ಕಾರದ ಬೊಕ್ಕಸಕ್ಕೆ ಯಾವುದೇ ನಷ್ಟ ಉಂಟಾಗುವುದಿಲ್ಲ. |

| | | |
|---|---|---|
| ಊ. | ಹಂಚಿಕೆಯಾದ ನಿವೇಶನಗಳಿಗೆ ಕೂಡಲೇ ಹಣ ಪಾವತಿ ಮಾಡುವಂತೆ ಸರ್ಕಾರ ಅನುಸರಿಸುತ್ತಿರುವ ಮುಂಜಾಗ್ರತಾ ಕ್ರಮಗಳೇನು? | ಕೈಗಾರಿಕಾ ಪ್ರದೇಶಗಳಲ್ಲಿ ನಿವೇಶನ ಹಂಚಿಕೆಮಾಡುವಾಗ ಹಂಚಿಕೆ ಪತ್ರದಲ್ಲಿ ನಿವೇಶನದ ಬಾಕಿ ಮೊತ್ತ ಪಾವತಿಸಲು ವಿವಿಧ ವರ್ಗಗಳಿಗೆ ವಿಧಿಸಿರುವ ನಿಯಮಗಳನ್ನು ಅನುಬಂಧ-3 ರಲ್ಲಿ ಒದಗಿಸಿದೆ. |

**ಸಂಖ್ಯೆ: ಸಿಐ 76 ಐಎಪಿ 2018**

(ಕೆ.ಜೆ. ಜಾರ್ಜ್) 11/7/18

**ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಸಕ್ಕರೆ ಸಚಿವರು**